**OS** 366/2024 **PW** -1

**ದಿಃ 18.11.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ.ಎ.ಭಟ್ ರವರಿಂದ.**

ನಿಶಾನೆ ಪಿ 9 ರಲ್ಲಿ ಸ್ವತ್ತಿನ ವಿಳಾಸ 2930 ಸಿದ್ದೇಶ್ವರ ಪಾರ್ಕ ಬನಶಂಕರಿ ಬಡಾವಣೆ ಹುಬ್ಬಳ್ಳಿ-ಧಾರವಾಡ ಎಂಬುವುದಾಗಿ ಇದೆ ಎಂದರೆ ಸರಿ. ದಾವಾ ಸಲ್ಲಿಸುವ ಸಮಯಲ್ಲಿ ನಾನು ಇ-ಸ್ವತ್ತಿನ ನಕಲನ್ನು ಹಾಜರುಪಡಿಸಿದ್ದು ಅದರಲ್ಲಿ ಸ್ವತ್ತಿನ ವಿಳಾಸ ಎಂಬುವುದರಲ್ಲಿ 2930 ಅದ್ಯಾಪಕ ನಗರ ಹುಬ್ಬಳ್ಳಿ-ಧಾರವಾಡ ಎಂಬುವುದಾಗಿ ಇದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಶಾನೆ ಪಿ 10 ಎಂದು ಗುರ್ತಿಸಲಾಯಿತು. ನಿಶಾನೆ ಪಿ 9 ಮತ್ತು ನಿಶಾನೆ ಪಿ 10 ರಲ್ಲಿರುವ ಭಾವ ಚಿತ್ರ ಒಂದೆ ಇದೆ ಎಂದರೆ ಸರಿ. ಅದೇ ರೀತಿ ನಿಶಾನೆ ಪಿ 9 ಮತ್ತು ನಿಶಾನೆ ಪಿ 10 ರಲ್ಲಿ ಸ್ವತ್ತಿನ ಚಕಬಂಧಿ ಒಂದೆ ರೀತಿ ಇದೆ ಎಂದರೆ ಸರಿ.

ದಿಃ28-08-2025 ಕ್ಕೆ ನಾವು ನಿಶಾನೆ ಪಿ 9ನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇವೆ ಎಂದರೆ ಸಾಕ್ಷಿ ನಾವು ಅರ್ಜಿ ಕೊಟ್ಟು ತಿದ್ದುಪಡಿ ಮಾಡಿಸಿಕೊಂಡು ಬಂದಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಖರೀದಿ ಪತ್ರಗಳಲ್ಲಿ ಶೆಡ್ಯೂಲ್ ಎ ಮತ್ತು ಶೆಡ್ಯೂಲ್ ಬಿ ಆಸ್ತಿಗಳಲ್ಲಿ ಎಲ್ಲಿಯೂ ಕೂಡಾ ಆಸ್ತಿ ನಂಬರ 2930 ಎಂದು ನಮೂದು ಆಗಿಲ್ಲ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಇ-ಸ್ವತ್ತು ಅಧ್ಯಾಪಕ ನಗರಕ್ಕೆ ಸಂಬಂಧಪಟ್ಟಿದ್ದು ಆದರೂ ನಾವು ಉದ್ದೇಶಪೂರ್ವಕವಾಗಿ ಅದನ್ನು ಸಿದ್ದೇಶ್ವರ ಪಾರ್ಕ ಬನಶಂಕರಿ ಬಡಾವಣೆ ಎಂದು ತಿದ್ದುಪಡಿಸಿ ಮಾಡಿಸಿಕೊಂಡು ಬಂದಿರುತ್ತೇವೆ ಎಂದರೆ ಸಾಕ್ಷಿ ಅರ್ಜಿ ಕೊಟ್ಟು ತಿದ್ದುಪಡಿ ಮಾಡಿಸಿಕೊಂಡಿರುತ್ತೇವೆ ಎನ್ನುತ್ತಾರೆ. ಅರ್ಜಿ ಕೊಟ್ಟ ಬಗ್ಗೆ ನಿಮ್ಮ ಕಡೆ ಒಂದು ನಕಲು ಇರಬೇಕೆಂದರೆ ಸಾಕ್ಷಿ ಅರ್ಜಿ ಕೊಟ್ಟಿದ್ದು ಅವರ ಕಡೆ ಇದೆ ಅವರು ನಮಗೆ ಹಿಂಬರಹ ಕೊಟ್ಟಿಲ್ಲ ಎನ್ನುತ್ತಾರೆ. ನ್ಯಾಯಾಲಯದಲ್ಲಿ ನಾನು ಸದರಿ ಆಸ್ತಿ ಕೊಂಡು ಕೊಂಡಿದ್ದೇನೆ ಎಂದು ತೋರಿಸಲು ನಾನು ಹಣದ ಆಮೀಷ ತೋರಿಸಿ ನಿಶಾನೆ ಪಿ 9 ನ್ನು ಸೃಷ್ಟಿ

ಮಾಡಿಸಿಕೊಂಡು ಬಂದಿರುತ್ತೇನೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ.

13

ಸದರಿ ಪ್ಲ್ಯಾಟಿನ ವಿದ್ಯುತ್ತಚ್ಛಕ್ತಿ ಮೀಟರ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಬಿಲ್ಡರ್ ಹೆಸರನಲ್ಲಿ ಇದೆ ಇನ್ನು ನಮ್ಮ ಹೆಸರಿಗೆ ಬದಲಾವಣೆ ಮಾಡಿಸಿಕೊಂಡಿಲ್ಲ ಎನ್ನುತ್ತಾರೆ. ಆ ರೀತಿ ಬದಲಾವಣೆ ಮಾಡಿಸಿಕೊಳ್ಳದೆ ಇರಲು ಕಾರಣ  ಎನೂ ಎಂದರೆ ಸಾಕ್ಷಿ ನ್ಯಾಯಾಲಯದಲ್ಲಿ ದಾವಾ ಇರುವ ಕಾರಣ ಮಾಡಿಸಿಲ್ಲ ಎನ್ನುತ್ತಾರೆ. ನಾನು ಕಳೆದ ಬಾರಿ ನನ್ನ ವಿಚಾರಣೆಯಲ್ಲಿ ಮನೆಯ ಇಂಟೆರಿಯರ್ ಕೆಲಸ ಮಾಡಿಸಿದ್ದೇನೆ ಎಂದು ಹೇಳಿದ್ದು ಸದರಿ ಕೆಲಸ ಮಾಡಿಸಲು ಕಾರಪೆಂಟಗಳು ವಿದ್ಯುತ್ತಚ್ಛಕ್ತಿಯನ್ನು ಉಪಯೋಗಿಸುತ್ತಾರೆ ಎಂದರೆ ಸರಿ. ಆ ರೀತಿ ಪ್ಲ್ಯಾಟ್ ನ ವಿದ್ಯುಚ್ಛಕ್ತಿ ಉಪಯೋಗಿಸಿರುತ್ತೇವೆ ಈ ಬಗ್ಗೆ ಅದರ ಬಿಲ್ ಪಾವತಿ ಮಾಡಿರುತ್ತೇವೆ ಎಂದು ತೋರಿಸಲು ನಿಮ್ಮ ಬಳಿ ಪಾವತಿ ರಶೀದಿ ಇದೆಯಾ ಎಂದರೆ ಸಾಕ್ಷಿ ಬಿಲ್ಡರ ಕಡೆಯಿಂದ temporary ಕರೆಂಟ ತೆಗೆದುಕೊಂಡಿರುತ್ತೇವೆ ಎನ್ನುತ್ತಾರೆ. ಖರೀದಿ ಪತ್ರ ಆದಾಗಿನಿಂದಲೂ ಇವತ್ತಿನವರೆಗೂ ವಿದ್ಯುಚ್ಛಕ್ತಿ  ಬಿಲ್ ಕಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಮನೆಯ ಕಬ್ಜಾ ತೆಗೆದುಕೊಂಡಿದ್ದೇನೆ ಎಂದು ತೋರಿಸಲು ನಿಮ್ಮ ಬಳಿ ಎನು ದಾಖಲೆ ಇದೆ ಎಂದರೆ ಬಿಲ್ಡರ ಕಡೆಯಿಂದ ನಮಗೆ ಕೀ ಕೊಟ್ಟಿದ್ದರು ಅಷ್ಟೆ ಎನ್ನುತ್ತಾರೆ. ಸದರಿ ಮನೆಯನ್ನು ಬಡ್ಡಿ ವ್ಯವಹಾರದ ಸಂಬಂಧ ನಾನು ಸೆಕ್ಯೂರಿಟಿ purpose ಗೆ ತೆಗೆದುಕೊಂಡಿದ್ದೇನೆ ಎಂದರೆ ಸಾಕ್ಷಿ ಅದು ಸರಿ ಅಲ್ಲ ನಾನು ಇರಲು ಆ ಮನೆಯನ್ನು ಖರೀದಿಸಿದ್ದೇನೆ ಎನ್ನುತ್ತಾರೆ. ಸದರಿ ಮನೆಯ ಕಬ್ಜಾವನ್ನು ನಾನು ಪಡೆಯದೆ ಇರುವ ಕಾರಣ ವಿದ್ಯುಚ್ಛಕ್ತಿ  ಬಿಲ್ ನಾಗಲಿ ಮತ್ತು ಸದರಿ ಅಪಾರ್ಟಮೆಂಟನ ಮೆಂಟೆನ್ಸ ಚಾರ್ಜನ್ನು ನಾನು ಪಾವತಿ ಮಾಡುತ್ತಿಲ್ಲವೆಂದರೆ ಸಧ್ಯಕ್ಕೆ ನಾನು ಮೆಂಟೆನ್ಸ ಕೊಡುತ್ತಿಲ್ಲ ಎನ್ನುತ್ತಾರೆ. ಮನೆಯ ಛಾವಿಯನ್ನು ಸದರಿ ಬಿಲ್ಡರ್ಸರವರಿಂದ ಪಡೆದದುಕೊಂಡ ಬಗ್ಗೆ ಯಾರದಾದರೂ ಸಾಕ್ಷಿ ಮಾಡುಸುತ್ತೀರಾ ಎಂದರೆ ಸಾಕ್ಷಿ ಮಾಡಿಸುತ್ತೇನೆ ಎನ್ನುತ್ತಾರೆ. ಸದರಿ ಛಾವಿಯನ್ನು ಎಲ್ಲಿ ಪಡೆದುಕೊಂಡಿರಿ ಎಂದರೆ ಸಾಕ್ಷಿ ಬಿಲ್ಡರ್ಸ ಕಚೇರಿಯಲ್ಲಿ ಎನ್ನುತ್ತಾರೆ. ಸಾಮಾನ್ಯವಾಗಿ ಅಪಾರ್ಟಮೆಂಟಗಳನ್ನು ಹ್ಯಾಂಡ್ ಓವರ್ ಮಾಡುವಾಗ possession letter ಎಂಬುವುದಾಗಿ ಕೊಡುತ್ತಾರೆ ಅದನ್ನು ಎನಾದರೂ ನಿಮಗೆ ಕೊಟ್ಟಿದ್ದಾರಾ ಎಂದರೆ

ಸಾಕ್ಷಿ ಮನೆ ಇನ್ನು ಅಂದರೆ ಕ್ರಯ ಪತ್ರ ಆಗುವ ಸಮಯದಲ್ಲಿ ready ಆಗಿರಲಿಲ್ಲ ಎನ್ನುತ್ತಾರೆ. ready ಇಲ್ಲದ ಮನೆಯ ಕಬ್ಜಾ ಕೊಡಲು ಸಾಧ್ಯ ಇಲ್ಲವೆಂದರೆ ಸಾಕ್ಷಿ ಸದರಿ



ಬಿಲ್ಡಿಂಗ ready ಆದ ನಂತರ ನಮಗೆ ಭಾವಿಯನ್ನು ಕೊಟ್ಟಿರುತ್ತಾರೆ ಎನ್ನುತ್ತಾರೆ. ಭಾವಿಯನ್ನು ಯಾವಾಗ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಕ್ರಯ ಪತ್ರ ಆದ ದಿನವೆ ಕೊಟ್ಟಿರುತ್ತಾರೆ ಎನ್ನುತ್ತಾರೆ. ಸದರಿ ಮನೆಯಲ್ಲಿ ರಾಜೇಶ್ವರಿ ಹಿರೇಮಠ ಎಂಬುವವರು ಖರೀದಿಗೆ ತೆಗೆದುಕೊಂಡು ಅಲ್ಲಿ ವಾಸ ಇರುತ್ತಾರೆ ಎಂದರೆ ಸಾಕ್ಷಿ ಸದರಿ ಪ್ಲ್ಯಾಟ್ ನ ಲಾಕ್ ತೆಗೆದು ಮನೆಯ ಒಳಗೆ ಹೋಗಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ಬಗ್ಗೆ ಮನೆಯ ಮಾಲೀಕರಿಗೆ ದೂರು ನೀಡಿರುತ್ತೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಆದರೆ ದಿನಾಂಕ ನೆನಪಿಲ್ಲ ಎನ್ನುತ್ತಾರೆ. ರಾಜೇಶ್ವರಿ ಹಿರೇಮಠ ಇವರು ಸದರಿ ಮನೆಯ ಕಬ್ಜಾ ತೆಗೆದುಕೊಂಡು ಮನೆಯ ಒಳಗೆ ಹೋದ ಕಾರಣ ಮತ್ತು ನನ್ನದು ಕೇವಲ ಬಡ್ಡಿ ವ್ಯವಹಾದ ಸಂಬಂಧ ಇರುವ ಕಾರಣ ನಾನು ಮನೆಯ ಮಾಲೀಕರಿಗೆ ಯಾವುದೇ ರೀತಿಯ ದೂರು ನೀಡಿಲ್ಲವೆಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ. ಈಗ ಮನೆಯ ಮಾಲೀಕರು ಎಲ್ಲಿ ಇದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮನೆಯ ಮಾಲಿಸೀಕರು ಊರು ಬಿಟ್ಟು ಓಡಿ ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮನೆಯ ಮಾಲೀಕರು ಹುಬ್ಬಳ್ಳಿಯಲ್ಲಿ ಇರುವವರೆಗೂ ಅವರು ನನಗೆ ನಿರತರವಾಗಿ ಬಡ್ಡಿ ಕೊಡುತ್ತಿದ್ದು ಆ ಸಂಬಂಧ ನಾನು ಸುಮ್ಮನಿದ್ದು ಅವರು ಊರು ಬಿಟ್ಟು ಹೋದ ನಂತರ ರಾಜೇಶ್ವರಿ ಹಿರೇಮಠ ಇವರಿಗೆ ನಾನು ಈ ರೀತಿ ತೊಂದರೆ ಕೊಡುತ್ತಿದ್ದೇನೆಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ಮಾಲೀಕರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿದರೆ ಅವರು ಬಂದು ಸತ್ಯ ಹೇಳುತ್ತಾರೆ ಎಂಬ ಕಾರಣಕ್ಕೆ ನಾನು ಅವರನ್ನು ಪಾರ್ಟಿ ಮಾಡಿಲ್ಲವೆಂದರೆ ಸಾಕ್ಷಿ ಅವರು ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಅವರನ್ನು ಯಾಕೆ ಪಾರ್ಟಿ ಮಾಡಿಲಿ ಎಂದು ಹೇಳುತ್ತಾರೆ. ಖರೀದಿ ಪತ್ರದಲ್ಲಿ ಆಸ್ತಿಗೆ ಸಂಬಂಧಿಸಿದಂತೆ ಎನಾದರೂ ತಂಟೆ ತಕರಾರು ಬಂದರೆ ನಾನು ನಿಂತು ಬಗೆಹರಿಸಿಕೊಡುತ್ತೇನೆಂದು ಮಾಲೀಕರು ಬರೆಸಿರುತ್ತಾರೋ ಇಲ್ಲವ್ರೋ ಎಂದರೆ ಸಾಕ್ಷಿ ಖರೀದಿ ಪತ್ರದಲ್ಲಿ ಎನೂ ಬರೆದಿದೆ ಅದು ಗೊತ್ತಿಲ್ಲ ಎನ್ನುತ್ತಾರೆ. ರಾಜೇಶ್ವರಿ ಹಿರೇಮಠ ಇವರು ದಾವಾ ಆಸ್ತಿಯಲ್ಲಿ ಕಾನೂನು ಬದ್ದವಾಗಿ ಖರೀದಿ ಮಾಡಿ

ಕಬ್ಜಾ  ಪಡೆದು ಕಬ್ಜಾದಲ್ಲಿರುತ್ತಾರೆ ಅವರ ವಿರುದ್ಧ ನಾನು ಪರಿಹಾರ ಕೇಳಲು ಬರುವುದಿಲ್ಲವೆಂದರೆ ಸಾಕ್ಷಿ ಬಿಲ್ಡರ್ಸ ಕಡೆಯಿಂದ ನಾವು ಖರೀದಿಗೆ ತೆಗೆದುಕೊಂಡಿರುತ್ತೇವೆ ಎನ್ನುತ್ತಾರೆ.

15

ನಾನು ಯಾವುದೇ ಕಾಲಕ್ಕೂ  ಆಸ್ತಿಯ ಕಬ್ಜಾದಲ್ಲಿ ಬಂದಿರುವುದಿಲ್ಲ ಆ ಕಾರಣಕ್ಕೆ ದಾವಾದಲ್ಲಿ ಕೇಳುವ ಪರಿಹಾರ ಪಡೆಯಲು ಅರ್ಹನಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ